ದಿನಾಂಕಃ 05.07.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಕೆ.ಎನ್.ಎನ್ ವಕೀಲರಿಂದಃ

1 ನೇ ಪ್ರತಿವಾದಿಗೆ 3 ಜನ ಮಕ್ಕಳು ಎಂದರೆ ಸರಿ . ಅವರುಗಳು ಮಂಜೇಗೌಡ , ರಮೇಶ್ ಹಾಗೂ ಎಂ. ಭಾರತಿ. ದಾವಾ ಆಸ್ತಿ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ . ಸದರಿ ದಾವಾ ಆಸ್ತಿ ಪ್ರತಿವಾದಿಗೆ ಅವರ ಗಂಡನ ಕಡೆಯಿಂದ ಬಂದಂತ ಆಸ್ತಿ ಎಂದರೆ ಸರಿ . ವ್ಯವಹಾರ ಯಾವಾಗ ನಡೆಯಿತು ಎಂದರೆ 2015 ರಲ್ಲಿ ತಾಲ್ಲೂಕ ಕಚೇರಿ ಹತ್ತಿರ ನಡೆಯಿತು. ಮಾತುಕತೆ ಊರಿನಲ್ಲಿಯೂ ಆಗಿತ್ತು ಆದರೆ ಮಂಜೆಗೌಡ ಇರಲಿಲ್ಲ. ಸದರಿ ಕರಾರು ಪತ್ರವನ್ನು ನಿಮ್ಮ ಹೆಸರಿನಲ್ಲಿ ಮಾಡಿಸಿಕೊಳ್ಳಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ಮಾಡಲಿ ಎಂದು ಮಾಡಿಸಿದೆ ಎನ್ನುತ್ತಾರೆ. ಯಾವ ದಿನಾಂಕ ದಂದು ವ್ಯವಹಾರ ಆಗಿತ್ತು ಎಂದರೆ ನನಗೆ ದಿನಾಂಕ ನೆನಪಿರಲಿಲ್ಲ ಎನ್ನುತ್ತಾರೆ. 2015 ನೇ ಇಸವಿಯಲ್ಲಿ ದಾವಾಸ್ವತ್ತು 1 ಗುಂಟೆಗೆ 5 ಲಕ್ಷ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ 1,20,000/- ಎನ್ನುತ್ತಾರೆ. ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿರುತ್ತೀರಾ ಎಂದರೆ ಇಲ್ಲ ಆದರೆ ನಾವು ಇದ್ದೆವು ಎನ್ನುತ್ತಾರೆ. 1 ಮತ್ತು 2 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಹೌದು ಎನ್ನುತ್ತಾರೆ. 2 ನೇ ಪ್ರತಿವಾದಿ ಹೆಂಡತಿ ಮಕ್ಕಳನ್ನು ಬಿಟ್ಟು ಊರು ಬಿಟ್ಟಿರುತ್ತಾರೆ ಹಾಗೂ ಕುಡಿಯುವ ಚಟ ಇರುತ್ತದೆ ಎಂದರೆ ಸಾಕ್ಷಿ ಊರಲ್ಲೆ ಇರುತ್ತಾರೆ ಎನ್ನುತ್ತಾರೆ. ಕರಾರು ಪತ್ರದಲ್ಲಿ ಮಂಜೇಗೌಡ ಇರುವಿಕೆಯ ಬಗ್ಗೆ ಬರೆಸಿರುವುದಿಲ್ಲ ಎಂದರೆ ಆ ಸಮಯದಲ್ಲಿ ಅವರು ಇರಲಿಲ್ಲ ಎನ್ನುತ್ತಾರೆ. ಸದರಿ ದಿನಾಂಕದಂದು 2 ಲಕ್ಷ ಹಣ ಇರುವುದನ್ನು ತೋರಿಸಲು ಅದಿಕೃತವಾಗಿ ಬ್ಯಾಂಕ್ ದಾಖಲಾತಿಯನ್ನು ಇಟ್ಟಿರುತ್ತೀರಾ ಎಂದರೆ ಸಾಕ್ಷಿಯ ಮನೆಯಲ್ಲಿ

ಇಟ್ಟಿರುತ್ತೇವೆ ಎನ್ನುತ್ತಾರೆ. 2 ನೇ ಪ್ರತಿವಾದಿಗೆ ಕುಡಿಯುವ ಚಟ ಇದ್ದ ಕಾರಣ ಬಡ್ಡಿ ಸಾಲಕ್ಕೋಸ್ಕರ ನಿಮ್ಮ ಹತ್ತಿರ ಹಣ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ಯಾವ ಕಾರಣಕ್ಕಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತು ಎನ್ನುತ್ತಾರೆ. ನೀವು ಹಾಗೂ ಸಾಕ್ಷಿದಾರರು ಸೇರಿಕೊಂಡು ಕರಾರು ಪತ್ರ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿದಾರರ ನಿಮ್ಮ ಊರಿನವರಲ್ಲ ಎಂದರೆ ಸಾಕ್ಷಿಯು ಪಕ್ಕದೂರಿನವರು ಎನ್ನುತ್ತಾರೆ. ಸಾಕ್ಷಿದಾರರು ವ್ಯವಹಾರಕ್ಕೆ ಸೇರಿರುವುದಿಲ್ಲ ಎಂರದೆ ಸಾಕ್ಷಿಯು ಸೇರಿರುತ್ತಾರೆ ಎನ್ನುತ್ತಾರೆ. ವ್ಯವಹಾರಕ್ಕೆ ನಿಮ್ಮ ಗ್ರಾಮದವರು ಸೇರಿರುದಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಅಕ್ರಮ ಲಾಭ ಹೊಂದುವ ಕಾರಣ ಸುಳ್ಳು ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ